ಆಶ್ರಯ ಯೋಜನೆಯಡಿ ಭೂಮಿ ಖರೀದಿ

3135 (3373); ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ದಲಿಂಗಪ್ಪ (ಶಿರಹಟ್ಟಿ)

ಅ) ಶಿರಹಟ್ಟಿ ಮತಕ್ಷೇತ್ರದ ಲಕ್ಷೇಶ್ವರ ಪುರಸಭೆ ವ್ಯಾಪ್ತಿಯ ನಿವೇಶನ ರಹಿತರಿಗೆ ನಿವೇಶನ ಹಂಚುವ ಬಗ್ಗೆ ಅವಶ್ಯವಿರುವ ಭೂಮಿ ಖರೀದಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ;

ಇ) ವಿಳಂಬವಾಗಿರುವ ಸದರಿ ಪ್ರಸ್ತಾವನೆಗೆ ಯಾವ ಕಾಲಮಿತಿಯಲ್ಲಿ ಮಂಜೂರಾತಿ ದೊರಕಿಸಲು ಸರ್ಕಾರ ಕ್ರಮಕೈಗೊಳ್ಳುವುದು?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಹೌದು.

ಆ) ಜಿಲ್ಲಾಧಿಕಾರಿಗಳು ಗದಗ ಜಿಲ್ಲೆ ಇವರು ಜಮೀನು ಖರೀದಿಗಾಗಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮಾರ್ಗಸೂಚಿ ಬೆಲೆಗಿಂತ ಹೆಚ್ಚು ಇರುವುದರಿಂದ ಸದರಿ ಪ್ರಸ್ತಾವನೆಗೆ ಕಂದಾಯ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದೆ.

ಇ) ಕಂದಾಯ ಇಲಾಖೆಯಿಂದ ಅಭಿಪ್ರಾಯ ಬಂದ ಮೇಲೆ ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

ಮಹಿಳಾ ಪದವಿ ಕಾಲೇಜಿನ ಮಂಜೂರಾತಿ

3137 (3375); ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ದಲಿಂಗಪ್ಪ

ಅ) ಶಿರಹಟ್ಟಿ ತಾಲ್ಲೂಕಿನಲ್ಲಿ ಕೇವಲ ಒಂದು ಸರ್ಕಾರಿ ಪದವಿ ಕಾಲೇಜಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ತಾಲ್ಲೂಕಿನ ಲಕ್ಷ್ಮೇಶ್ವರದಲ್ಲಿ ಮಹಿಳಾ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಹಿಳಾ ಪದವಿ ಕಾಲೇಜನ್ನು ತೆರೆಯಲು ಸರ್ಕಾರ ಮಂಜೂರು ಮಾಡಲಾಗುವುದೇ;

ಇ) ಹಾಗಿದ್ದಲ್ಲಿ, ಯಾವ ಸಾಲಿನಿಂದ ಮಹಿಳಾ ಪದವಿ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧಾರ ಪರಿಶೀಲಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಸರ್ಕಾರಿ ಪ್ರೌಢ ಶಾಲೆ/ಪದವಿ ಪೂರ್ವ ಕಾಲೇಜುಗಳಿಗೆ ಸೌಕರ್ಯ

3138 (3376); ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ದಲಿಂಗಪ್ಪ (ಶಿರಹಟ್ಟಿ)

ಅ) ಶಿರಹಟ್ಟಿ ಮತಕ್ಷೇತ್ರದಲ್ಲಿ ಸರ್ಕಾರಿ ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

ಆ) ಸದರಿ ವಿದ್ಯಾಲಯಗಳಲ್ಲಿ ಯಾವ ಶಾಲಾ ಕಾಲೇಜುಗಳ ಕೊಠಡಿ ಸಮಸ್ಯೆ, ಶಿಕ್ಷಕರುಗಳ ಕೊರತೆ, ಪ್ರಯೋಗಾಲಯ, ಕುಡಿಯುವ ನೀರಿನ ಸಮಸ್ಯೆ, ಶೌಚಾಲಯ, ಕಾಂಪೌಂಡ್ ಗೋಡೆಗಳ ಸಮಸ್ಯೆಗಳನ್ನು ಎದುರಿಸುತ್ತಿವೆ; (ಶಾಲಾ ಕಾಲೇಜುಗಳ ವಿವರ ನೀಡುವುದು)

ಇ) ಇವುಗಳಿಗೆ ಸದರಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಸಕ್ತ ವರ್ಷ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಪ್ರೌಢಶಾಲೆಗಳು–25
ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.